ಇದೊಂದೇ ಋತುವಲ್ಲ. ಹೋದ ವರ್ಷ ಕರ್ನಾಟಕವು ವಿಜಯ್ ಹಜಾರೆ ಟ್ರೋಫಿ ಜಯಿಸುವಲ್ಲಿಯೂ ದೇವದತ್ತ ಆಟ ಪ್ರಮುಖವಾಗಿತ್ತು. ಪ್ರತಿವರ್ಷವೂ ತಮಗೆ ಸಿಕ್ಕ ಅವಕಾಶಗಳಲ್ಲಿ ರನ್‌ಗಳ ಹೊಳೆ ಹರಿಸುತ್ತಿರುವ ದೇವದತ್ತ ಭಾರತ ಎ ತಂಡದಲ್ಲಿ ಆಡುವಾಗಲೂ ತಮ್ಮ ಪ್ರತಿಭೆ ಸಾಬೀತು ಮಾಡಿದ್ದಾರೆ. ಆದರೆ ಕಳೆದ ಆಸ್ಟ್ರೇಲಿಯಾ ಪ್ರವಾಸದಲ್ಲಿ ಅವರಿಗೆ ಸಿಕ್ಕಿದ್ದು ಒಂದೇ ಒಂದು ಟೆಸ್ಟ್ ಪಂದ್ಯ ಮಾತ್ರ. ಅದೇ ಅವರ ಓರಗೆಯ ಕೆಲವು ಆಟಗಾರರಿಗೆ ಸತತ ವೈಫಲ್ಯ ಅನುಭವಿಸಿದರೂ ಹಲವು ಅವಕಾಶಗಳು ದೊರೆತವು.

25 ವರ್ಷದ ದೇವದತ್ತ ಈಗ ಭಾರತ ತಂಡದಲ್ಲಿ ತಮ್ಮ ಸ್ಥಾನ ಕಂಡುಕೊಳ್ಳಲು ಹರಸಾಹಸ ಪಡಬೇಕಾಗಿದೆ. ಏಕೆಂದರೆ; ಪೈಪೋಟಿಯು ಬಹಳ ಕಠಿಣವಾಗಿದೆ. ಅವರು ಮುಂಬರುವ ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಎಲ್ಲ ರೀತಿಯಿಂದಲೂ ಅರ್ಹರು. ಆದರೆ ಅಗ್ರ ಕ್ರಮಾಂಕದಲ್ಲಿ ಅವರಿಗೆ ಯಶಸ್ವಿ ಜೈಸ್ವಾಲ್ ಅವರಿಂದ ಪೈಪೋಟಿ ಇದೆ. ಅಲ್ಲದೇ ಏಕದಿನ ಕ್ರಿಕೆಟ್‌ಗೆ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ತಂಡದಲ್ಲಿರುವುದರಿಂದ ದೇವದತ್ತಗೆ ಅವಕಾಶ ಸಿಗುವುದು ತುಸು ಕಷ್ಟ.

> **ಕಠಿಣ ಪರಿಶ್ರಮ, ಏಕಾಗ್ರತೆ ಮತ್ತು ಛಲ ಬಿಡದ ಪ್ರಯತ್ನಗಳಿಗೆ ಯಾವತ್ತೂ ಉತ್ತಮ ಫಲ ದೊರೆಯುತ್ತದೆ ಎನ್ನುವುದಕ್ಕೆ ದೇವದತ್ತ ಪಡಿಕ್ಕಲ್ ಉತ್ತಮ ಉದಾಹರಣೆ.**

ಸಹನಶೀಲ ವ್ಯಕ್ತಿಯಾಗಿರುವ ದೇವದತ್ತ ಮೊದಲಿನಿಂದಲೂ ಇಂತಹ ಕಠಿಣ ಸವಾಲುಗಳನ್ನು ಎದುರಿಸುತ್ತಲೇ ಬೆಳೆದಿದ್ದಾರೆ. ಕಠಿಣ ಪರಿಶ್ರಮ, ನಿರಂತರ ಏಕಾಗ್ರತೆ ಮತ್ತು ಛಲ ಬಿಡದ ಪ್ರಯತ್ನಗಳಿಗೆ ಯಾವತ್ತೂ ಉತ್ತಮ ಫಲ ದೊರೆಯುತ್ತದೆ ಎನ್ನುವುದಕ್ಕೆ ಅವರು ಉತ್ತಮ ಉದಾಹರಣೆ. ಕೆಲ ವರ್ಷಗಳ ಹಿಂದೆ ಆರೋಗ್ಯ ಕೈಕೊಟ್ಟಾಗಲೂ ಎದೆಗುಂದಲಿಲ್ಲ. ಭಾರತ ತಂಡದಲ್ಲಿ ಟೆಸ್ಟ್ ಕ್ರಿಕೆಟ್ ಆಡುವ ಗುರಿಯನ್ನು ಬಿಟ್ಟುಕೊಡಲಿಲ್ಲ. ಅವರ ಛಲಕ್ಕೆ 2024ರಲ್ಲಿ ಧರ್ಮಶಾಲಾದಲ್ಲಿ ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಆಡುವ ಅವಕಾಶ ಲಭಿಸಿತು.

2020ರ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ದೇವದತ್ತ ಆಯ್ಕೆಯಾಗಿದ್ದರು. ಆದರೆ ಆಗ ಅವರಿಗೆ ಕೋವಿಡ್ ಆಗಿತ್ತು. ಆದ್ದರಿಂದ ಮೊದಲ ಪಂದ್ಯದಲ್ಲಿ ಆಡಲು ಸಾಧ್ಯವಾಗಿರಲಿಲ್ಲ. ಚೇತರಿಸಿಕೊಂಡ ಅವರು ನಂತರದ ಪಂದ್ಯಗಳಲ್ಲಿ ಆಡಿದ್ದರು. ಆ ಟೂರ್ನಿಯಲ್ಲಿ 473 ರನ್‌ಗಳನ್ನು ಕಲೆಹಾಕಿ ಉದಯೋನ್ಮುಖ ಆಟಗಾರ ಪ್ರಶಸ್ತಿ ಗಳಿಸಿದ್ದರು. 2020–21ರ ವಿಜಯ್ ಹಜಾರೆ ಟ್ರೋಫಿ (ಏಕದಿನ) ಕ್ರಿಕೆಟ್ ಟೂರ್ನಿಯಲ್ಲಿಯೂ ನಾಲ್ಕು ಶತಕ ಗಳಿಸಿದ್ದರು. ಲಿಸ್ಟ್ ಎ ಪಂದ್ಯದಲ್ಲಿ ಈ ಸಾಧನೆ ಮಾಡಿದ ಮೊದಲ ಬ್ಯಾಟರ್ ಆಗಿದ್ದರು. 2021ರ ಐಪಿಎಲ್‌ನಲ್ಲಿಯೂ ಅವರು 400ಕ್ಕೂ ಹೆಚ್ಚು ರನ್ ಗಳಿಸಿದ್ದರು. ಅದೇ ವರ್ಷ ಶ್ರೀಲಂಕಾ ಎದುರಿನ ಟಿ20 ಸರಣಿಯಲ್ಲಿ ಆಡಲು ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದರು.



ಆದರೆ ಅದೇ ವರ್ಷ ದೇವದತ್ತ ಆರೋಗ್ಯ ಕೈಕೊಟ್ಟಿತು. ಚೇತರಿಸಿಕೊಳ್ಳಲು ದೀರ್ಘ ಕಾಲ ಹಿಡಿಯಿತು. ಸುಮಾರು ಒಂದೂವರೆ ವರ್ಷ ಅವರು ಕ್ರಿಕೆಟ್‌ಗೆ ಮರಳಲು ಶ್ರಮ ಪಡಬೇಕಾಯಿತು. ಒಂದು ಐಪಿಎಲ್ ಆವೃತ್ತಿಯಿಂದಲೂ ಹೊರಗುಳಿದರು. ಆದರೆ ಮರಳಿದ ನಂತರ ಅವರು ಬೇಗನೆ ಲಯಕ್ಕೆ ಮರಳಿದ್ದು ವಿಶೇಷ.

ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಸಿಕ್ಕಾಗ ಸಿಗಲಿ; ಅಲ್ಲಿಯವರೆಗೂ ರನ್‌ಗಳ ಹೊಳೆ ಹರಿಸುತ್ತಲೇ ಇರುತ್ತೇನೆ ಎಂಬ ದೃಢಸಂಕಲ್ಪದಲ್ಲಿ ಅವರು ಬ್ಯಾಟ್ ಹಿಡಿದು ಕಣಕ್ಕಿಳಿಯುತ್ತಿದ್ದಾರೆ. ಪುಲ್, ಸ್ಕೇರ್‌ಡ್ರೈವ್, ಸ್ಲಾಗ್‌ಸ್ವೀಪ್ ಮತ್ತು ಕವರ್‌ಡ್ರೈವ್‌ಗಳ ಸುಂದರ ಆಟವನ್ನು ತೋರಿಸುತ್ತಿದ್ದಾರೆ. ಜೊತೆಗೆ ಫೀಲ್ಡಿಂಗ್‌ನಲ್ಲಿಯೂ ಚಾಕಚಕ್ಯತೆ ಮೆರೆಯುತ್ತಿದ್ದಾರೆ. ಆದರೆ ಅವರ ಸ್ಥಿರ ಮತ್ತು ನಿರಂತರವಾದ ಚೆಂದದ ಆಟಕ್ಕೆ ಹೊಸ ವರ್ಷದಲ್ಲಾದರೂ ತಕ್ಕ ಫಲ ಸಿಗುತ್ತಾ? ■



ಫಲ ಸಂಧಾನ

# ಆಕರ್ಷಕವೀ ಚೂರಿ ಹಣ್ಣು

ಪುಟ್ಟದಾಗಿರುವ ಈ ಹಣ್ಣನ್ನು ಕನ್ನಡದಲ್ಲಿ ಚೂರಿ ಹಣ್ಣು, ಚೇಮುಳ್ಳು, ಚೂರಿ ಮುಳ್ಳು, ಪರ್ಗಿ ಅಥವಾ ಹರಗಿ ಎಂದು ಕರೆಯುತ್ತಾರೆ. ಚೂರಿ ಹಣ್ಣನ್ನು ಇಂಗ್ಲಿಷಿನಲ್ಲಿ 'ಜಾಕಲ್ ಜುಜುಬೆ' (Jackal Jujube) ಎನ್ನಲಾಗುತ್ತದೆ. ಇದರ ವೈಜ್ಞಾನಿಕ ಹೆಸರು **Ziziphus oenoplia.**

ಮುಳ್ಳುಗಳನ್ನು ಹೊಂದಿರುವ, ಹರಡುವ ಪೊದೆ ಅಥವಾ ಬಳ್ಳಿಯಂತೆ ಬೆಳೆಯುವ ಸಸ್ಯ ಇದಾಗಿದೆ. ಎಲೆಗಳು ಅಂಡಾಕಾರದಲ್ಲಿದ್ದು, ಗಿಡದ ಮೇಲೆ ಜೋಡಿಯಾಗಿ ಮುಳ್ಳುಗಳಿರುತ್ತವೆ (ಒಂದು ನೇರವಾಗಿದ್ದರೆ, ಇನ್ನೊಂದು ಬಾಗಿರುತ್ತದೆ). ಹಣ್ಣುಗಳು ಚಿಕ್ಕದಾಗಿ, ಗುಂಡಗಿದ್ದು ಹಣ್ಣಾದಾಗ ಕಪ್ಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಹೊಳಪಾಗುತ್ತವೆ.

ಈ ಕಾಡು ಹಣ್ಣುಗಳು ತಿನ್ನಲು ಯೋಗ್ಯ. ಹೊಟ್ಟೆನೋವು, ಜೀರ್ಣಶಕ್ತಿ ಹೆಚ್ಚಿಸಲು ಮತ್ತು ಅಸಿಡಿಟಿ ಸಮಸ್ಯೆಗೆ ರಾಮಬಾಣ ಎಂದು ಹೇಳಲಾಗಿದೆ. ಇದರ ಬೇರು ಮತ್ತು ಎಲೆಗಳ ಕಷಾಯವನ್ನು ಗಾಯಗಳನ್ನು ವಾಸಿ ಮಾಡಲು ಹಾಗೂ ಸೋಂಕು ನಿವಾರಕವಾಗಿ ಬಳಸಲಾಗುತ್ತದೆ. ಈ ಹಣ್ಣಿನಲ್ಲಿ ವಿಟಮಿನ್ ಸಿ ಮತ್ತು ಆ್ಯಂಟಿಯಾಕ್ಸಿಡೆಂಟ್‌ಗಳು ಸಮೃದ್ಧವಾಗಿದ್ದು, ರೋಗನಿರೋಧಕ ಶಕ್ತಿ ಹೆಚ್ಚಿಸಲು ಸಹಾಯ ಮಾಡುತ್ತದೆ. ಆಯುರ್ವೇದದಲ್ಲಿ ಇದನ್ನು ಹುಳ ಬಾಧೆಗೆ ಔಷಧಿಯಾಗಿ ಬಳಸುತ್ತಾರೆ. ಭಾರತದಾದ್ಯಂತ ಕಾಡುಗಳಲ್ಲಿ, ವಿಶೇಷವಾಗಿ ದಕ್ಷಿಣ ಭಾರತದ ಮೈಸೂರು, ಬೆಳಗಾವಿ, ದಕ್ಷಿಣ ಕನ್ನಡ ಮತ್ತು ಶಿವಮೊಗ್ಗದಂತಹ ಪ್ರದೇಶಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ.

■ ಗಾಯತ್ರಿ ಎಸ್.ಎನ್.

